

# ಮುಂಬೈ ಡಬ್ಬಾವಾಲಾಗಳ ಎದೆ ಢವಢವ

**ಸಮಯದ ಹಳಿ ಮೇಲೆ ಓಡುವ ಮುಂಬೈ ನಗರಿಗರಿಗೆ ಊಟದ ಬುತ್ತಿ ತಲುಪಿಸುವ ಕಾಯಕಕ್ಕೆ ಕೊರೊನಾ ಕಾಲ ಬರೆ ಎಳೆದಿದೆ. ಮುಂಬೈನ ಗುರುತೇ ಆಗಿದ್ದ 'ಡಬ್ಬಾವಾಲಾ' ಪರಂಪರೆ ಕಣ್ಮರೆಯಾಗುತ್ತಿದೆ.**

■ ಶ್ರೀನಿವಾಸ ಜೋಕಟ್ಟೆ

ಮುಂಬೈ ಮಹಾನಗರದ ವೇಗದ ಬದುಕಿನಲ್ಲಿ, ಉದ್ಯೋಗಿಗಳ ಒತ್ತಡವನ್ನು ಒಂದಿಷ್ಟು ಕಡಿಮೆ ಮಾಡಲು ಯಾರಿಗಾದರೂ ಸಾಧ್ಯವಾಗಿದೆ ಎನ್ನುವುದಾದರೆ, ಅವರಲ್ಲಿ ಡಬ್ಬಾವಾಲಾರದ್ದು ಮೊದಲ ಸ್ಥಾನ.

ಬಿಳಿ ಟೊಪ್ಪಿ ಧರಿಸಿ, ಹತ್ತಾರು ಊಟದ ಬುತ್ತಿಗಳನ್ನು ಹಿಡಿದು ಲಗುಬಗೆಯಿಂದ ಓಡಾಡುವ ಈ ಡಬ್ಬಾವಾಲಾರ ಪ್ರಸಿದ್ಧಿ ಮುಂಬೈಗೆ ಮಾತ್ರ ಸೀಮಿತವಾಗಿಲ್ಲ. ವಿಶ್ವಕ್ಕೇ ಪರಿಚಿತರಿವರು. ಕೆಲಸಕ್ಕೆ ಹೋಗುವವರಿಗೆ ಅವರವರ ಮನೆಯಿಂದ ಅವರವರ ಕಚೇರಿಗಳಿಗೆ ಊಟ ತಲುಪಿಸುವ ಮರಾಠಿ ಭಾಷಿಗರು ಈ ಡಬ್ಬಾವಾಲಾರು.

ಮುಂಬೈನ ಜನದಟ್ಟಣೆಯ ಲೋಕಲ್ ರೈಲುಗಳನ್ನು ಹತ್ತುವುದೇ ಬಲು ಕಷ್ಟ. ನಿಲ್ಲಲೂ ಜಾಗವಿಲ್ಲದ ಆ ರೈಲಿನಲ್ಲಿ ಊಟದ ಬುತ್ತಿ ಒಯ್ಯುವುದು ಸಾಹಸವೇ ಸರಿ. ಇಂಥ ಪರಿಸ್ಥಿತಿಯಲ್ಲಿ ಮನೆಯಿಂದ ಕಚೇರಿಗೋ, ವ್ಯಾಪಾರದ ಜಾಗಕ್ಕೋ ಮನೆಯ ಊಟದ ಡಬ್ಬ ತಲುಪಿಸಿ, ಮತ್ತೆ ಕಚೇರಿಯಿಂದ ಅವರವರ ಮನೆಗೆ ವಾಪಸ್ ಡಬ್ಬಾ ತಲುಪಿಸುವ ಕೆಲಸ ಬಹುಹಿಂದೆಯೇ ಶುರುವಾಗಿತ್ತು. ಇದು ಉದ್ಯೋಗಿಗಳ ತಲೆಬಿಸಿಯನ್ನೂ ಕಡಿಮೆ ಮಾಡಿತ್ತು.

1890ರಲ್ಲಿ ಆ ಕಾಲದ ಕೆಲವು ಬ್ರಿಟಿಷ್ ಮತ್ತು ಪರ್ಷಿಯನ್ ಸಮುದಾಯದ ಜನರಿಗಾಗಿ ಮಹದೇವ ಬಚ್ಚೆ ದೋಡಿಬಾ ರಾಮಬಾವ್ಹೂ ಮೇಢ್ಗೆ ಮೊದಲಾದವರು ಸೇರಿ ಮೊದಲ ಬಾರಿ ಮುಂಬೈನಲ್ಲಿ ಡಬ್ಬಾವಾಲಾ ಪರಂಪರೆ ಆರಂಭಿಸಿದ್ದರು. ಆರಂಭದಲ್ಲಿ ನೂರರಷ್ಟಿದ್ದ ಗ್ರಾಹಕರ ಸಂಖ್ಯೆ ನಗರ ಬೆಳೆದಂತೆಲ್ಲಾ ಏರುತ್ತಾ ಬಂತು. ಸುಮಾರು 5000 ಡಬ್ಬಾವಾಲಾಗಳು 2,00,000 ಜನರಿಗೆ ಡಬ್ಬಾ ತಂದುಕೊಡುವ ಕೆಲಸ ಮಾಡುತ್ತಿದ್ದರು. ಸಮಯ ಪರಿಪಾಲನೆ, ಶಿಸ್ತು, ಡಬ್ಬಾವಾಲಾರ ವೃತ್ತಿ ಬದ್ಧತೆಗೆ ಸಾಕ್ಷಿಯಾಗಿದ್ದವು. ಒಬ್ಬ ಡಬ್ಬಾವಾಲಾ, ದಿನಕ್ಕೆ ಸುಮಾರು 50–70 ಕಿ.ಮೀ. ಪ್ರಯಾಣಿಸಿ, ಸರಾಸರಿ 35–40 ಕ್ಯಾನ್‌ಗಳನ್ನು ತಲುಪಿಸಬಲ್ಲವನಾಗಿದ್ದ.

60ರಿಂದ 80 ಕೆ.ಜಿ. ತೂಗುವ ಊಟದ ಡಬ್ಬಗಳನ್ನು ನಗುಮುಖದಿಂದಲೇ ಒಯ್ಯುವ ಡಬ್ಬಾವಾಲಾಗಳು ಅಪ್ಪಿತಪ್ಪಿಯೂ ಒಬ್ಬರ ಊಟದ ಡಬ್ಬವನ್ನು ಮತ್ತೊಬ್ಬರಿಗೆ ನೀಡಿದ ಉದಾಹರಣೆ ಸಿಗುವುದಿಲ್ಲ.

ತಮ್ಮ ಪಾಲಿಗೆ ಬಂದ ಊಟದ ಬುತ್ತಿಗಳು ಎಲ್ಲಾ ಗ್ರಾಹಕರನ್ನು ತಲುಪುವವರೆಗೆ ಊಟ ಮಾಡದ ಈ ಡಬ್ಬಾವಾಲಾರ ಕಾರ್ಯ ನಿಷ್ಠೆಗೆ ಎಲ್ಲೆಡೆಯೂ ಮೆಚ್ಚುಗೆಯಿದೆ. ಮುಂಬೈಗೆ ಆ ದಿನಗಳಲ್ಲಿ ಬಂದಿದ್ದ ಬ್ರಿಟನ್ ಯುವರಾಜ ಚಾರ್ಲ್ಸ್ ಡಬ್ಬಾವಾಲಾರನ್ನು ಭೇಟಿ ಮಾಡಿದ್ದರು. ಅಷ್ಟೇ ಅಲ್ಲ, ತಮ್ಮ ವಿವಾಹ ಸಮಾರಂಭಕ್ಕೆ ಡಬ್ಬಾವಾಲಾಗಳಿಗೂ ಆಮಂತ್ರಣ ನೀಡಿದ್ದರು. 2002ರಲ್ಲಿ ಸಿಕ್ಸ್ ಸಿಗ್ಮಾ ಸರ್ಟಿಫಿಕೇಟ್ ದೊರೆಯುತ್ತಲೇ ದೊಡ್ಡ ದೊಡ್ಡ ವ್ಯಾಪಾರಿಗಳ ದೃಷ್ಟಿ ಮುಂಬೈನ ಡಬ್ಬಾವಾಲಾರತ್ತ ಹೊರಳಿತು. ಇವರ ಬಗ್ಗೆ ಸಾಕ್ಷ್ಯ ಚಿತ್ರಗಳೂ ಬಂದವು, ಸಂಶೋಧನಾ ಪ್ರಬಂಧಗಳು ಪ್ರಕಟಗೊಂಡವು. ಡಬ್ಬಾವಾಲಾರ ಹೆಸರು ಗಿನ್ನೆಸ್ ವಿಶ್ವ ದಾಖಲೆಯಲ್ಲೂ ಅಚ್ಚಾಯಿತು.

ಇಂಥ ಪ್ರಸಿದ್ಧಿ ಪಡೆದಿದ್ದ ಡಬ್ಬಾವಾಲಾಗಳ ಪರಿಸ್ಥಿತಿ ಈಗ ಡೋಲಾಯಮಾನವಾಗಿದೆ. ಅವರ ಎದೆ ಢವಢವ ಎನ್ನಲು ಶುರುವಾಗಿದೆ.

2020ರ ನಂತರ ಕೊರೊನಾ ಸಾಂಕ್ರಾಮಿಕದಿಂದ ಕೆಟ್ಟ ಪರಿಣಾಮ ಎದುರಿಸಿದವರಲ್ಲಿ ಡಬ್ಬಾವಾಲಾಗಳೂ ಒಬ್ಬರು. ಕೊರೊನಾ ಸೋಂಕಿನ ತಡೆಗೆ ಕಚೇರಿಗಳಲ್ಲಿನ ಕೆಲಸದ ವಿಧಾನದಲ್ಲಾದ ಬದಲಾವಣೆ ಡಬ್ಬಾವಾಲಾರ ಬದುಕಿನ ಮೇಲೆ ಬರೆ ಹಾಕಿದೆ.

ಕೊರೊನಾ ನಂತರ ಅನೇಕ ಜನರು 'ಮನೆಯಿಂದಲೇ ಕೆಲಸ' ಮಾಡುತ್ತಿದ್ದಾರೆ. ಇದರೊಂದಿಗೆ ಆನ್‌ಲೈನ್ ಆಹಾರ ವಿತರಣೆ ಪ್ರಮಾಣವೂ ಹೆಚ್ಚಿದೆ. ಇನ್ನೊಂದೆಡೆ ಶಾಲೆ, ಕಚೇರಿಗಳಲ್ಲೂ ಕ್ಯಾಂಟೀನ್ ಸೇವೆ ಆರಂಭವಾಗಿದೆ. ಇವೆಲ್ಲವೂ, ಊಟದ ಡಬ್ಬಿ ತಲುಪಿಸುವುದನ್ನೇ ಕಾಯಕ ಮಾಡಿಕೊಂಡಿದ್ದ ಡಬ್ಬಾವಾಲಾಗಳ ಬದುಕು ಚದುರಲು ಕಾರಣಗಳಾಗಿವೆ.

ಓರ್ವ ಡಬ್ಬಾವಾಲಾಗೆ ಊಟದ ಡಬ್ಬಿ ತಲುಪಿಸುವ ಕೆಲಸಕ್ಕೆ ತಿಂಗಳಿಗೆ 25,000 ರೂ. ತನಕ ಸಿಗುತ್ತಿತ್ತು. ಕೊರೊನಾ ನಂತರ ಅವರ ಸಂಪಾದನೆ 12,000ಕ್ಕೆ ಇಳಿದಿದೆ. ಎರಡು ಲಕ್ಷ ಕ್ಯಾನ್‌ಗಳೀಗ 40ರಿಂದ 50 ಸಾವಿರವಾಗಿದೆ. ಮುಂಬೈನಲ್ಲೀಗ ಕೇವಲ ಒಂದೂವರೆ ಸಾವಿರ ಡಬ್ಬಾವಾಲಾಗಳು ಉಳಿದಿದ್ದಾರೆ. ಅವರಲ್ಲಿ ಅನೇಕರು ಪರ್ಯಾಯ ಕೆಲಸಗಳನ್ನು ಹುಡುಕಿಕೊಂಡಿದ್ದಾರೆ. ಹಲವರು ಹಳ್ಳಿ ಹಾದಿ ಹಿಡಿದಿದ್ದಾರೆ. ಈ ನಡುವೆ ಅವರ ಸಂಘ ಮತ್ತು ಟ್ರಸ್ಟ್, ಡಬ್ಬಾವಾಲಾ ಪರಂಪರೆ ಉಳಿಸಿಕೊಳ್ಳಲು ಏದುಸಿರುಬಿಡುತ್ತಿದೆ.

ಪ್ರತಿಕ್ರಿಯಿಸಿ: feedback@sudha.co.in